# ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 290 ಇಎಸ್‌ಟಿ(7) 2016
ಲಗತ್ತು : ನಮೂನೆ

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 25/04/2017

**ಅತ್ಯಂತ ಜರೂರು.**

**-:ಜ್ಞಾಪನ:-**

**ವಿಷಯ:** ಆಡಳಿತದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲನಾ ಸಮಿತಿಯನ್ನು ಪುನ: ರಚಿಸುವ ಕುರಿತು.

**ಉಲ್ಲೇಖ:** 1. ಅಧ್ಯಕ್ಷರು ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂ.ಕಅಪ್ರಾ/ಅ/136/2016-17 ದಿ: 02-03-2017

2. ಈ ಕಛೇರಿಯ ಜ್ಞಾಪನ ಸಂಖ್ಯೆ:ಡಿಟಿಇ/280/ಇಎಸ್‌ಟಿ(7) 2014 ದಿ:19-11-2014

3. ಈ ಕಛೇರಿಯ ಸಮಸಂಖ್ಯೆಯ ಸುತ್ತೋಲೆ: ದಿ:01-04-2017

******

ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರ ಉಲ್ಲೇಖಿತ ಪತ್ರ ದಿನಾಂಕ: ದಿ: 02-03-2017 ರಲ್ಲಿ (ಪ್ರತಿ ಲಗತ್ತಿಸಿದೆ) ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆ ಸ್ಥಾನಮಾನ ದೊರೆತಿರುವ ಹಿನ್ನಲೆಯಲ್ಲಿ ಆಡಳಿತದ ಎಲ್ಲಾ ಹಂತದಲ್ಲೂ ಕನ್ನಡ ಭಾಷೆಯನ್ನು ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿಯುಳ್ಳ ಅಧಿಕಾರಿಗಳು ಹೊಣೆಗಾರಿಕೆಯಿಂದ ವಿಮುಖರಾಗುತ್ತಿದ್ದು, ಇಂತಹ ಅಧಿಕಾರಿಗಳನ್ನು ಎಚ್ಚರಿಸಿ ಜಾಗೃತಿ ಮೂಡಿಸುವ ಅಗತ್ಯತೆ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಕನ್ನಡ ಏನಿದ್ದರೂ ಹೇಳಿಕೊಳ್ಳುವುದಕ್ಕಷ್ಟೇ ಆಡಳಿತ ಭಾಷೆ ಎನ್ನುವ ಅಭಿಪ್ರಾಯ ಜನಮಾನಸದಲ್ಲಿ ಮೂಡುವ ಮುನ್ನವೇ ಅಧಿಕಾರಿಗಳನ್ನು ಎಚ್ಚರಿಸಿ ಆಡಳಿತದಲ್ಲಿ ಕಡ್ಡಾಯವಾಗಿ ಕನ್ನಡವನ್ನು ಅನುಷ್ಠಾನಗೊಳಿಸಲು ನಿರ್ದೇಶಿಸಲಾಗಿದೆ.

ಅದರಂತೆ ಆಡಳಿತದಲ್ಲಿ ಕನ್ನಡ ಭಾಷೆಯನ್ನು ಅನುಷ್ಠಾನಗೊಳಿಸುವ ಉದ್ದೇಶದ ಹಿನ್ನೆಲೆಯಲ್ಲಿ ಹೊರಡಿಸಿರುವ ಸರ್ಕಾರದ ಆದೇಶ ಮತ್ತು ಸುತ್ತೋಲೆಗಳನ್ನು ಗೌರವಿಸಿ ಅನುಷ್ಠಾನಗೊಳಿಸುವ ಸಂಬಂಧ ಉಲ್ಲೇಖ(3)ರ ಸುತ್ತೋಲೆಯಲ್ಲಿ ಈಗಾಗಲೇ ಸೂಚಿಸಲಾಗಿದೆ.

ಉಲ್ಲೇಖ(2)ರ ಜ್ಞಾಪನದಲ್ಲಿ ಆಡಳಿತದಲ್ಲಿ ಕನ್ನಡ ಭಾಷೆಯ ಅನುಷ್ಠಾನದ ಪ್ರಗತಿಯ ಬಗ್ಗೆ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯಲ್ಲಿದ್ದ ಜಂಟಿ ನಿರ್ದೇಶಕರು (ಆಡಳಿತ) ಆಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಜಿ.ನಿರಂಜನದಾಸ್ ರಾಜ್ಪಾನ್‌ರವರು ವಯೋನಿವೃತ್ತಿಯನ್ನು ಹೊಂದಿರುತ್ತಾರೆ ಮತ್ತು ಪ್ರಭಾರೆ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಟಿ.ಟಿ.ಪೂಜಾರಿ ಇವರು ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ ಇಲ್ಲಿಗೆ ವರ್ಗಾವಣೆ ಹೊಂದಿರುತ್ತಾರೆ. ಆದ್ದರಿಂದ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಕಛೇರಿಯ ಆಡಳಿತದಲ್ಲಿ ಕನ್ನಡ ಅನುಷ್ಠಾನದ ಬಗ್ಗೆ ಅಭಿವೃದ್ಧಿ ಪ್ರಾಧಿಕಾರದ ನಮೂನೆಯ ಪ್ರಕಾರ ಮಾಹಿತಿಯನ್ನು ಪರಿಶೀಲಿಸಿ ಅದರಂತೆ 15 ದಿನಗಳ ಒಳಗೆ ಪ್ರಾಧಿಕಾರಕ್ಕೆ ವರದಿ ಸಲ್ಲಿಸಲು ಶ್ರೀಮತಿ ರಶ್ಮಿ ಜಿ., ಜಂಟಿ ನಿರ್ದೇಶಕರು, (ಆಡಳಿತ) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು ರವರ ನೇತೃತ್ವದಲ್ಲಿ ಪರಿಶೀಲನಾ

.......2

ಸಮಿತಿಯನ್ನು ಈ ಕೆಳಕಂಡಂತೆ ಪುನ: ರಚಿಸಲಾಗಿದೆ.

1. ಶ್ರೀಮತಿ ರಶ್ಮಿ ಜಿ. ಕೆ.ಎ.ಎಸ್, ಜಂಟಿ ನಿರ್ದೇಶಕರು, (ಆಡಳಿತ) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

2. ಅಶೋಕ್ ಎಂ. ಬೋಜೇದಾರ್. ಜಂಟಿ ನಿರ್ದೇಶಕರು, (ಸಿಡಿಸಿ) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

3. ಡಾ॥ಟಿ.ಜಿ.ಬಸವರಾಜು, ಪ್ರಾಂಶುಪಾಲರು (ಪ್ರಭಾರೆ), ಸರ್ಕಾರಿ ಎಸ್.ಕೆ.ಎಸ್.ಜೆ.ಟಿ. ಸಂಸ್ಥೆ ಬೆಂಗಳೂರು

4. ಡಿ.ವಿ. ಶ್ರೀನಿವಾಸಮೂರ್ತಿ, ಪ್ರಾಂಶುಪಾಲರು (ಪ್ರಭಾರೆ), ಸರ್ಕಾರಿ ಎಸ್.ಜೆ. ಪಾಲಿಟೆಕ್ನಿಕ್, ಬೆಂಗಳೂರು

ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಿಂದ ಶೈಕ್ಷಣಿಕ ತನಿಖಾ ತಂಡ ಮತ್ತು ಲೆಕ್ಕ ಪರಿಶೋಧನಾ ತಂಡಗಳು ಸರ್ಕಾರಿ/ಅನುದಾನಿತ/ಅನುದಾನರಹಿತ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆಗಳು/ ಚಿತ್ರಕಲಾ/ಕಾಲೇಜುಗಳು ಮತ್ತು ಶಾಲೆಗಳಿಗೆ ಭೇಟಿ ನೀಡಿದಾಗ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಮೂನೆಯ ಪ್ರಕಾರ ಕನ್ನಡ ಅನುಷ್ಠಾನದ ಬಗ್ಗೆ ಪರಿಶೀಲಿಸಿ ಮೇಲ್ಕಂಡ ಸಮಿತಿಗೆ ವರದಿ ನೀಡಬೇಕೆಂದು ತಿಳಿಸಲಾಗಿದೆ.

ನಿರ್ದೇಶಕರು

ಇವರಿಗೆ,

ಮೇಲ್ಕಂಡ ಸಮಿತಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಯವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

ಪ್ರತಿಗಳು: ಇವರಿಗೆ ಮಾಹಿತಿಗಾಗಿ

1. ಅಧ್ಯಕ್ಷರು ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕೊಠಡಿ ಸಂ:206 2ನೇ ಮಹಡಿ, ವಿಧಾನ ಸೌಧ, ಬೆಂಗಳೂರು-01
2. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕೊಠಡಿ ಸಂ:263, 2ನೇ ಮಹಡಿ, ವಿಧಾನ ಸೌಧ, ಬೆಂಗಳೂರು-01
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು-01
4. ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಮತ್ತು ಸರ್ಕಾರಿ/ಅನುದಾನಿತ/ಅನುದಾನರಹಿತ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆಗಳು/ಚಿತ್ರಕಲಾ/ಕಾಲೇಜುಗಳು ಮತ್ತು ಶಾಲೆಗಳ ಎಲ್ಲಾ ಅಧಿಕಾರಿಗಳು/ಪ್ರಿನ್ಸಿಪಾಲರು/ಸಿಬ್ಬಂದಿಯವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
5. ಇ-ಆಡಳಿತ ಘಟಕಕ್ಕೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
6. ನಿರ್ದೇಶಕರ ಆಪ್ತಶಾಖೆಗೆ.
7. ಕಡತಕ್ಕೆ.

**ಪ್ರೊ. ಎಸ್.ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಕಚೇರಿ: ಕೊಠಡಿ ಸಂಖ್ಯೆ ೨೦೬
೨ನೇ ಮಹಡಿ, ವಿಧಾನಸೌಧ
ಬೆಂಗಳೂರು-೫೬೦ ೦೦೧
ದೂರವಾಣಿ: ೦೮೦-೨೨೨೫೬೪೬೩೫
೨೨೦೩೩೫೧೯
ಸಂಚಾರವಾಣಿ-೯೪೪೮೯೪೯೭೩೭

**ಸಂಖ್ಯೆ: ಕಅಪ್ರಾ/ಅ/೧೩೬/೨೦೧೬-೧೭**

ದಿ:೦೨-೦೩-೨೦೧೭

**ಮಾನ್ಯರೇ,**

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಒಂದು ಶಾಸನಬದ್ಧ ಸಂಸ್ಥೆಯಾಗಿದ್ದು, ರಾಜ್ಯ ಸರ್ಕಾರದ ಆಡಳಿತದಲ್ಲಿ ಕನ್ನಡ ಅನುಷ್ಠಾನವನ್ನು ಪರಿಶೀಲಿಸಿ ಅನುಷ್ಠಾನದಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ನಿರಂತರವಾಗಿ ಸಲಹೆ ಮತ್ತು ಮಾರ್ಗದರ್ಶನ ನೀಡುವುದರ ಜೊತೆಗೆ ಕಡ್ಡಾಯವಾಗಿ ಅನುಷ್ಠಾನ ಮಾಡುವ ಉಸ್ತುವಾರಿ ಜವಾಬ್ದಾರಿ ನೀಡಲಾಗಿದೆ.

ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆ. ಆಡಳಿತದ ಎಲ್ಲಾ ಹಂತದಲ್ಲೂ ಕನ್ನಡ ಬಳಕೆಯಾಗಬೇಕೆನ್ನುವುದು ಸರ್ಕಾರದ ಆಶಯ ಹಾಗೂ ದಿಟ್ಟ ನಿಲುವು. ಜನರಾಡುವ ಭಾಷೆಯಲ್ಲಿ ಆಡಳಿತ ನಡೆಸಿದಾಗ ಜನರ ನೋವು-ನಲಿವುಗಳಿಗೆ ಸ್ಪಂದಿಸಲು ಸಾಧ್ಯವೆನ್ನುವುದನ್ನು ಮನಗಂಡ ಸರ್ಕಾರ ಸಾಕಷ್ಟು ಆದೇಶ ಮತ್ತು ಸುತ್ತೋಲೆಗಳನ್ನು ಹೊರಡಿಸಿದೆ. ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ ಹಾಗೂ ಆದೇಶಗಳನ್ನು ಉಲ್ಲಂಘಿಸಿದರೆ ಅಂತಹ, ಇಲಾಖೆಯ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಕೈಗೊಳ್ಳುವುದಾಗಿ ಎಚ್ಚರಿಸಿದಾಗ್ಯೂ ಅಧಿಕಾರಿಗಳಲ್ಲಿ ಇನ್ನೂ ಮನಪರಿವರ್ತನೆಯಾಗದಿರುವುದು ದುರದೃಷ್ಟಕರ.

ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆ ಸ್ಥಾನಮಾನ ದೊರೆದಿರುವ ಹಿನ್ನೆಲೆಯಲ್ಲಿ ಕನ್ನಡವನ್ನು ಆಡಳಿತದ ಎಲ್ಲಾ ಹಂತದಲ್ಲೂ ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿಯುಳ್ಳ ಅಧಿಕಾರಿಗಳು ಹೊಣೆಗಾರಿಕೆಯಿಂದ ವಿಮುಖರಾಗುತ್ತಿದ್ದು, ಇಂತಹ ಅಧಿಕಾರಿಗಳನ್ನು ಎಚ್ಚರಿಸಿ ಜಾಗೃತಿ ಮೂಡಿಸುವ ಅಗತ್ಯತೆ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಕನ್ನಡ ಏನಿದ್ದರೂ ಹೇಳಿಕೊಳ್ಳುವುದಕಷ್ಟೆ ಆಡಳಿತ ಭಾಷೆಯೆನ್ನುವ ಅಭಿಪ್ರಾಯ ಜನಮಾನಸದಲ್ಲಿ ಮೂಡುವ ಮುನ್ನವೇ ಅಧಿಕಾರಿಗಳನ್ನು ಎಚ್ಚರಿಸಿ ಆಡಳಿದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲು ತಮ್ಮ ಇಲಾಖೆಯ ರಾಜ್ಯ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನಿರ್ದೇಶನ ನೀಡುವುದು.

ಆಡಳಿತದಲ್ಲಿ ಕನ್ನಡ ಅನುಷ್ಠಾನಗೊಳಿಸುವ ಉದ್ದೇಶದ ಹಿನ್ನೆಲೆಯಲ್ಲಿ ಹೊರಡಿಸಿರುವ ಆದೇಶ ಮತ್ತು ಸುತ್ತೋಲೆಗಳನ್ನು ಗೌರವಿಸಿ ಅನುಷ್ಠಾನಗೊಳಿಸುವುದು. ಅಲ್ಲದೇ, ತಮ್ಮ ಇಲಾಖೆಯ ಜಿಲ್ಲಾ ಮಟ್ಟದ ಕಛೇರಿಗಳಲ್ಲಿ ದೈನಂದಿನ ಪತ್ರ ವ್ಯವಹಾರ, ಟಿಪ್ಪಣಿ, ನಿರ್ದೇಶನ, ಕಡತ ನಿರ್ವಹಣೆ ಸಂಪೂರ್ಣವಾಗಿ ಕನ್ನಡದಲ್ಲಿರುವಂತೆ, ಜಾಲತಾಣವು ಸಂಪೂರ್ಣವಾಗಿ ಕನ್ನಡ ಭಾಷೆಯಲ್ಲಿ ಪ್ರಧಾನವಾಗಿ ತೆರೆದುಕೊಳ್ಳುವಂತೆ ನೋಡಿಕೊಳ್ಳಲು ಕಾರ್ಯಪ್ರವೃತ್ತರಾಗುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡುವುದು. ಈ ನಿಟ್ಟಿನಲ್ಲಿ ತಾವು ಕೈಗೊಂಡ ಕ್ರಮವನ್ನು ಪ್ರಾಧಿಕಾರಕ್ಕೆ ವರದಿ ಮಾಡುವುದು.

**ತಾವು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಮೂನೆಯ (ನಮೂನೆ ಲಗತ್ತಿಸಿದೆ.) ಮಾಹಿತಿಯನ್ನು ೧೫ ದಿನಗಳ ಒಳಗೆ ಈ ಕಛೇರಿಗೆ ಕಡ್ಡಾಯವಾಗಿ ಸಾಫ್ಟ್/ಹಾರ್ಡ್ ಪ್ರತಿಯನ್ನು ಇಮೇಲ್ ವಿಳಾಸ (chairman.kanpra@gmail.com & secretary.kanpra@gmail.com) ಕ್ಕೆ ಕಳುಹಿಸಿಕೊಡಲು ಕೋರಿದೆ.**

ವಂದನೆಗಳೊಂದಿಗೆ,

**ತಮ್ಮ ವಿಶ್ವಾಸಿ,**

(ಪ್ರೊ.ಎಸ್.ಜಿ.ಸಿದ್ಧರಾಮಯ್ಯ)

**ಗೆ,**
**ಶ್ರೀ ಹೆಚ್. ಯು. ತಳವಾರ,**
ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
**ಬೆಂಗಳೂರು.**

772
7/3/17

PS-2010

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಆಡಳಿತ ಕನ್ನಡ ಭಾಷೆ – ಸರ್ಕಾರಿ ಇಲಾಖೆ ಹಾಗೂ ಕಛೇರಿಗಳಲ್ಲಿ ಕನ್ನಡ ಭಾಷೆಯ ಬಳಕೆಯಲ್ಲಿ ಅಡೆತಡೆಗಳು – ಇಲಾಖೆ/ಕಛೇರಿಯ ಮುಖ್ಯಸ್ಥರನ್ನು ಜವಾಬ್ದಾರರನ್ನಾಗಿ ಮಾಡಿ ಆದೇಶಿಸಿದೆ.

### ಪ್ರಸ್ತಾವನೆ

ಆಡಳಿತ ಕನ್ನಡ ಬಳಕೆಯಲ್ಲಿ ಸಾಧಿತವಾಗಿರುವ ಪ್ರಗತಿಯ ಸಮೀಕ್ಷೆಗಾಗಿ ಹಲವಾರು ಜಿಲ್ಲೆಯಲ್ಲಿನ ವಿವಿಧ ಕಛೇರಿಗಳಿಗೆ ಕನ್ನಡ ಕಾವಲು ಸಮಿತಿಯ ಅಧ್ಯಕ್ಷರು ಭೇಟಿ ನೀಡಿ ಪರಿಶೀಲಿಸಿದಾಗ ಆಯಾ ಕಛೇರಿಯ ಮುಖ್ಯಸ್ಥರ ಅನಾಸಕ್ತಿ, ಅನಾದರಣೆ ಹಾಗೂ ಮುಂದಾಳತ್ವದ ಕೊರತೆಗಳು ತೀವ್ರ ಕಾರಣವೆಂಬುದು ಕಂಡುಬಂದಿದೆ.

ದಿನಾಂಕ ೨೧.೧.೧೯೮೪ ರಂದು ನಡೆದ ಆಡಳಿತ ಕನ್ನಡ ಕಾವಲು ಸಮಿತಿಯ ನಾಲ್ಕನೆಯ ಸಭೆಯು ಅನೇಕ ಪ್ರಕರಣಗಳನ್ನು ಪರಿಶೀಲನೆ ಮಾಡಿ ಅಂತಹ ಹಲವಾರು ವಿಷಯಗಳನ್ನು ಉದಾಹರಿಸಿ, ಇವೆಲ್ಲ ಕುಂದುಕೊರತೆ, ಅಡೆತಡೆಗಳಿಗೆ ಇಲಾಖೆಯ/ಕಛೇರಿಯ ಮುಖ್ಯಸ್ಥರನ್ನು ಜವಾಬ್ದಾರರನ್ನಾಗಿ ಮಾಡಿ, ಆಡಳಿತ ಕನ್ನಡ ಬಳಕೆಗಾಗಿ ಹೊರಡಿಸಲಾಗಿರುವ ಆದೇಶಗಳ ಉಲ್ಲಂಘನೆ ಪ್ರಕರಣಗಳಲ್ಲಿ ಸಂಬಂಧಿಸಿದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ಣಯಿಸಿ ಸರ್ಕಾರಕ್ಕೆ ಶಿಫಾರಸ್ಸು ಕಳುಹಿಸಿದೆ.

ಸದರಿ ನಿರ್ಣಯವನ್ನು ಸರ್ಕಾರ ಒಪ್ಪಿಕೊಂಡಿದೆ.

**ಸರ್ಕಾರಿ ಆದೇಶ ಕ್ರಮಾಂಕ ಡಿಪಿಎಆರ್ ೪೯ ಕೆಒಎಲ್ ೮೪**
**ಬೆಂಗಳೂರು, ದಿನಾಂಕ ೧೬ನೇ ಜುಲೈ ೧೯೮೪**

ಆಡಳಿತ ಕನ್ನಡ ಬಳಕೆಯಲ್ಲಿ ಕಛೇರಿಗಳಲ್ಲಿನ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ಉದಾಸೀನ, ಅನಾದರಣೆಗಳನ್ನು ಮನಗಂಡು ಈ ಕೆಳಗಿನ ವಿಷಯಗಳಲ್ಲಿ:

೧. ಕಛೇರಿಗಳಿಗೆ ಈಗಾಗಲೇ ಒದಗಿಸಿರುವ ಆಂಗ್ಲಭಾಷೆಯಲ್ಲಿನ ನಮೂನೆ, ರಿಜಿಸ್ಟರ್ ಮುಂತಾದವುಗಳನ್ನು ಕನ್ನಡದಲ್ಲಿ ಭರ್ತಿ ಮಾಡುವಂತೆ.

೨. ಅಂತರ ಕಛೇರಿ ಪತ್ರ ವ್ಯವಹಾರ ಕನ್ನಡದಲ್ಲೇ ಬರೆಯುವಂತೆ.

೩. ಕಛೇರಿ ಸಿಬ್ಬಂದಿ ಕಡತದಲ್ಲಿ, ಕನ್ನಡದಲ್ಲಿ ಟಿಪ್ಪಣಿ ಮಾಡಿದಾಗ ಮೇಲಿನ ಅಧಿಕಾರಿಗಳು – ಆಂಗ್ಲ ಭಾಷೆಯಲ್ಲಿನ ಟಿಪ್ಪಣಿ ಮಾಡದಂತೆ.

೪. ಕಛೇರಿ ಕಡತ ಮತ್ತು ಪತ್ರ ವ್ಯವಹಾರಗಳಲ್ಲಿ ಕನ್ನಡ ಬಳಕೆಗೆ ಯಾವ ತೊಂದರೆ ಇಲ್ಲದಿದ್ದರೂ ಆಂಗ್ಲ ಭಾಷೆಯನ್ನೇ ಬಳಸುವ ಪ್ರವೃತ್ತಿಯನ್ನು ಹೋಗಲಾಡಿಸುವಂತೆ.

೫. ಕಛೇರಿ ಮುಖ್ಯಸ್ಥರು ಸೇರಿದಂತೆ ಕಛೇರಿಯಲ್ಲಿನ ಎಲ್ಲ ನೌಕರರೂ ಕನ್ನಡ ಬಳಕೆಗೆ ಸಂಬಂಧಿಸಿ ಆದೇಶಗಳ ಅರಿವನ್ನು ಎಲ್ಲರಿಗೂ ಉಂಟು ಮಾಡುವಂತೆ.

೬. ನಾಮಫಲಕಗಳನ್ನು ತಕ್ಷಣ ಕನ್ನಡಕ್ಕೆ ಬದಲಾವಣೆ ಮಾಡುವಂತೆ.

೭. ಆಂಗ್ಲ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರು ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿಯನ್ನು ಕಲಿಯಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೊಂದಿಗೆ ಸಮಾಲೋಚಿಸಿ ವ್ಯವಸ್ಥೆ ಮಾಡುವಂತೆ ಮತ್ತು

೮. ಕನ್ನಡ ಬಳಕೆಗೆ ಸರ್ಕಾರ ಹೊರಡಿಸುವ ಆದೇಶಗಳ ಮತ್ತು ಕನ್ನಡ ಕಾವಲು ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಕಛೇರಿಗೆ ಭೇಟಿ ನೀಡುವ ಕಾಲದಲ್ಲಿ ಅನುಸರಿಸಬೇಕಾದ ಕ್ರಮಗಳಿಗೆ ಸಂಬಂಧಿಸಿದ ಆದೇಶಗಳ ಉಲ್ಲಂಘನೆಯಾಗದಂತೆ.

ನೋಡಿಕೊಳ್ಳಲು ಆಯಾ ಇಲಾಖೆ/ಕಛೇರಿಯ ಪ್ರತಿ ಮುಖ್ಯಸ್ಥರನ್ನೇ ಪೂರ್ಣ ಹಾಗೂ ವೈಯಕ್ತಿಕವಾಗಿ ಜವಾಬ್ದಾರರನ್ನಾಗಿ ಮಾಡಿದೆ. ಈ ವಿಷಯಗಳಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳದವರ ಮೇಲೆ ಸರ್ಕಾರಿ ಆದೇಶಗಳ ಉಲ್ಲಂಘನೆಗೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
(ವ್ಯೆ.ಕೆ. ವೆಂಕಟೇಶನ್)
ಅಪರ ಮುಖ್ಯ ಕಾರ್ಯದರ್ಶಿ

# ಕನ್ನಡ ಅಭಿವೃದ್ಧಿ ಪ್ರಾಧಿಕಾರ

ವಿಧಾನಸೌಧ, ಬೆಂಗಳೂರು.

## ಕನ್ನಡ ಅನುಷ್ಠಾನದ ಪ್ರಗತಿ ಪರಿಶೀಲನಾ ವಿವರಗಳು

***ಕೆಳಕಂಡ ದಾಖಲೆಗಳನ್ನು ಕಡ್ಡಾಯವಾಗಿ ಪರಿಶೀಲನಾ ಸಮಯದಲ್ಲಿ ಒದಗಿಸುವುದು ಅದಕ್ಕೆ ಪೂರ್ವದಲ್ಲಿ (ಮೂರು ದಿನದೊಳಗೆ) ಇಮೇಲ್ ಮೂಲಕ ಮಾಹಿತಿಯ ಈ ಕಚೇರಿಗೆ ಸಲ್ಲಿಸತಕ್ಕದ್ದು.***

*(ಇಮೇಲ್ ವಿಳಾಸ:- 'chairman.kanpra@gmail.com' 'secretary.kanpra@gmail.com')*

| ಕ್ರ. ಸಂ. | ವಿವರಗಳು | ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸುವುದು |
|---|---|---|
| ೧ | ಸುತ್ತೋಲೆಗಳು/ ಆದೇಶಗಳು/ ನೋಟೀಸುಗಳು/ ಅಧಿಕೃತ ಜ್ಞಾಪನ/ ಅಧಿಸೂಚನೆಗಳು ಕಡ್ಡಾಯವಾಗಿ ಕನ್ನಡದಲ್ಲಿ ಹೊರಡಿಸುತ್ತಿರುವ ವಿವರ. | |
| ೨ | ಸಿಬ್ಬಂದಿ ಹಾಜರಾತಿ ವಹಿ/ ಸ್ವೀಕೃತಿ ವಹಿ/ರವಾನೆ ವಹಿ/ ಕಛೇರಿ ಒಳಗಿನ ಮತ್ತು ಹೊರಗಿನ ನಾಮಫಲಕಗಳು ಕಡ್ಡಾಯವಾಗಿ ಕನ್ನಡದಲ್ಲಿರುವ ವಿವರ. | |
| ೩ | ಎಲ್ಲಾ ಕಾಗದದ ತಲೆಬರಹಗಳು (ಲೆಟರ್ ಹೆಡ್ಸ್)/ವಿಸಿಟಿಂಗ್ ಕಾರ್ಡ್‌ಗಳು/ಮೊಹರುಗಳು ಲೆಕ್ಕಪತ್ರಗಳು, ಇತರೆ ವಹಿಗಳು, ರಿಜಿಸ್ಟರ್‌ಗಳು ಕನ್ನಡದಲ್ಲಿರುವ ವಿವರ. | |
| ೪ | ಅರ್ಜಿ ನಮೂನೆಗಳು /ಪ್ರಕಟಣೆಗಳು/ ದೈನಂದಿನ ಜಾಹಿರಾತುಗಳು /ಲೈಸನ್ಸ್‌ಗಳು/ ಟೆಂಡರ್‌ಗಳು ಕನ್ನಡದಲ್ಲಿ ಇರುವ ಬಗ್ಗೆ ವಿವರ. | |
| ೫ | • ಕಡತಗಳಲ್ಲಿ ಬರೆಯುವ ಟಿಪ್ಪಣಿಗಳು, ಸಭೆಯ ನಡವಳಿಗಳು ಪ್ರಕಟಣೆಗಳು, ನೋಟೀಸುಗಳು, ಫಾರಂಗಳು, ಸರ್ಟಿಫಿಕೇಟ್‌ಗಳು ಹಾಗೂ ಪತ್ರ ವ್ಯವಹಾರಗಳು ಕನ್ನಡದಲ್ಲಿರುವುದು ಹಾಗೂ ಕನ್ನಡದಲ್ಲಿರದಿದ್ದರೆ ಸಂಬಂಧಪಟ್ಟವರಿಗೆ ಹಿಂದಿರುಗಿಸುವಂತೆ ನಿರ್ದೇಶನ ನೀಡುತ್ತಿರುವ ಬಗ್ಗೆ ವಿವರ ಒದಗಿಸುವುದು.<br>• ರಾಜ್ಯದ ಒಳಗಡೆ ನಡೆಸುವ ಪತ್ರ ವ್ಯವಹಾರಗಳು ಕಡ್ಡಾಯವಾಗಿ ಕನ್ನಡದಲ್ಲಿರುವ ಬಗ್ಗೆ ವಿವರ | |
| ೬ | ಕರ್ನಾಟಕ ರಾಜ್ಯಶಾಸನ ಸಭೆಗಳಿಗೆ ಒದಗಿಸುವ/ಮಂಡಿಸುವ ಎಲ್ಲ ಬಿಲ್ಲುಗಳು, ಮಸೂದೆಗಳು, ಇಲಾಖಾ ವಾರ್ಷಿಕ ಆಡಳಿತ ವರದಿಗಳು, ಇಲಾಖಾ ವಾರ್ಷಿಕ ವರದಿಗಳು, ಆಯವ್ಯಯ ದಾಖಲೆಗಳು ಇತ್ಯಾದಿಗಳನ್ನು ಕನ್ನಡದಲ್ಲಿಯೇ ನೀಡುತ್ತಿರುವ ಬಗ್ಗೆ ವಿವರ. | |
| ೭ | ಸಭೆಯ ಸೂಚನೆ, ಸಭೆಯ ಕಾರ್ಯಸೂಚಿ ಮತ್ತು ಸಭೆಯ ಸಂಕ್ಷಿಪ್ತ ಟಿಪ್ಪಣಿ/ನಡವಳಿಗಳನ್ನು ಕನ್ನಡದಲ್ಲಿ ತಯಾರಿಸಬೇಕು ಮತ್ತು ಇಲಾಖಾ ತನಿಖಾ ವರದಿಯಲ್ಲಿ ಕನ್ನಡವನ್ನು ಬಳಸಲಾಗಿದೆಯೇ? | |
| ೮ | ಸಚಿವಾಲಯ ಮಟ್ಟದಲ್ಲಿ ಕನ್ನಡ ಅನುಷ್ಠಾನದ ಜವಾಬ್ದಾರಿ ಮತ್ತು ಸಮನ್ವಯ ಕೆಲಸಗಳಿಗೆ ಕನ್ನಡ ಅನುಷ್ಠಾನ ವಿಭಾಗವನ್ನು ರಚನೆ ಮಾಡಿ ಪರಿಣಾಮಕಾರಿಯಾಗಿ ಕನ್ನಡ ಅನುಷ್ಠಾನ ಮಾಡಲಾಗುತ್ತಿರುವ ವಿವರ. | |
| ೯ | ತಮ್ಮ ಇಲಾಖೆಯ ವತಿಯಿಂದ ನಡೆಸುವ ಸಮಾರಂಭಗಳ ಬ್ಯಾನರ್‌ಗಳಲ್ಲಿ (ನಾಮಪಟ್ಟಿಗಳಲ್ಲಿ) ಕನ್ನಡವನ್ನು ಬಳಸುತ್ತಿರುವ ಬಗ್ಗೆ ವಿವರ. | |

| | | |
|---|---|---|
| ೧೦ | ಡಾ. ಸರೋಜಿನಿ ಮಹಿಷಿ ವರದಿ ಶಿಫಾರಸ್ಸುಗಳನ್ನು ಕಾರ್ಯಗತಗೊಳಸುವ ಬಗ್ಗೆ ಸಮೀಕ್ಷಾ ವರದಿಯನ್ನು ಪ್ರಾಧಿಕಾರಕ್ಕೆ ಕಳುಹಿಸಿದ ವಿವರಗಳು | |
| ೧೧ | ಕನ್ನಡ ಅಭಿವೃದ್ಧಿಯ ಉದ್ದೇಶಗಳನ್ನು ನೆರವೇರಿಸಲು ಜವಾಬ್ದಾರಿರರನ್ನಾಗಿ ಮಾಡಿರುವ ಅಧಿಕಾರಿಗಳ ತನಿಖಾ ತಂಡವನ್ನು ಸರ್ಕಾರದ ಆದೇಶದಂತೆ ತಮ್ಮ ಇಲಾಖೆಯಲ್ಲಿ ರಚನೆ ಮಾಡಿರುವ ವಿವರ ಒದಗಿಸುವುದು. | |
| ೧೨ | ಇಲಾಖೆಯ ಎಲ್ಲಾ ಸಭೆಗಳಲ್ಲಿ ಕನ್ನಡ ಅನುಷ್ಠಾನದ ಪ್ರಗತಿಯನ್ನು ಒಂದು ಅಂಶವಾಗಿ ತೆಗೆದುಕೊಂಡು ಪರಿಶೀಲನೆ ನಡೆಸುವುದು ಕಡ್ಡಾಯ. ಈ ಬಗ್ಗೆ ಕ್ರಮ ಕೈಗೊಂಡಿರುವ ಬಗ್ಗೆ ವಿವರ. | |
| ೧೩ | • ನೌಕರರಿಗೆ ನೀಡುವ ನೋಟೀಸುಗಳು, ನೇಮಕಾತಿ, ವರ್ಗಾವಣೆ ಮತ್ತು ರಜೆ ಮಂಜೂರಾತಿ ಆದೇಶಗಳು ಕಡ್ಡಾಯವಾಗಿ ಕನ್ನಡದಲ್ಲಿ ಹೊರಡಿಸಲಾಗುತ್ತಿದೆಯೇ?<br>• ಆಡಳಿತದಲ್ಲಿ ಕನ್ನಡ ಬಳಕೆ ಮಾಡದೆ ಇರುವ ನೌಕರರ ವಿರುದ್ಧ ಶಿಸ್ತುಕ್ರಮಗಳಾದ ವಾಗ್ದಂಡನೆ ಅಥವಾ ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವುದು ಅಥವಾ ಪದೋನ್ನತಿಯನ್ನು ತಡೆಹಿಡಿಯುವುದು ಅಥವಾ ಕಾಲವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಸುವ ಕುರಿತು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲಾಗುತ್ತಿದೆಯೇ? | |
| ೧೪ | ತಮ್ಮ ಇಲಾಖೆಗಳ ಜಾಲತಾಣ (ವೆಬ್‌ಸೈಟ್)ಗಳಲ್ಲಿ ಕನ್ನಡವು ಆಯ್ಕೆ ಭಾಷೆಯಾಗಿದೆ. ಇದನ್ನು ಬದಲಾಯಿಸಿ ಕನ್ನಡವನ್ನು ಪ್ರಧಾನ ಭಾಷೆಯಾಗಿ (ಡೀಫಾಲ್ಟ್ ಭಾಷೆಯಾಗಿ) ಬದಲಾಯಿಸಲಾಗಿದೆಯೇ? | |
| ೧೫ | ಮಾಹಿತಿ ಹಕ್ಕು ಅಧಿನಿಯಮದಡಿ ಬರುವಂತಹ ಪ್ರಶ್ನೆಗಳಿಗೆ ಕನ್ನಡದಲ್ಲಿ ಮಾಹಿತಿಯನ್ನು ನೀಡುವ ಸಂಬಂಧ ಮಾಹಿತಿ ಆಯೋಗಕ್ಕೆ ಹಾಗೂ ಮಾಹಿತಿ ಹಕ್ಕು ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿದ್ದಾರೆಯೇ? | |
| ೧೬ | ತಮ್ಮ ಇಲಾಖೆಯ ಸರ್ಕಾರಿ ವಾಹನಗಳ ಮೇಲೆ ಕನ್ನಡ ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ಅಳವಡಿಸಲಾಗಿದೆಯೇ? | |
| ೧೭ | ತಮ್ಮ ಇಲಾಖೆಗಳ ಮಾಹಿತಿ ಕೈಪಿಡಿಗಳು, ವಾರ್ಷಿಕ ವರದಿಗಳು ಕನ್ನಡದಲ್ಲಿದೆಯೇ ಮತ್ತು ಇಲಾಖೆಗಳಿಗೆ ಸಂಬಂಧಪಟ್ಟಂತೆ ಪದವಿವರಣ ಕೋಶವನ್ನು ಮುದ್ರಿಸಲು, ಕ್ರಮ ವಹಿಸಲಾಗಿದೆಯೇ? | |
| ೧೮ | ಗುತ್ತಿಗೆ, ಹೊರಗುತ್ತಿಗೆ ನೌಕರರೆಷ್ಟು, ಅವರು ಕನ್ನಡಿಗರು ಎಂಬುದಕ್ಕೆ ದಾಖಲೆಗಳನ್ನು ಒದಗಿಸುವುದು. | |